**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 23/2023**

| | | | |
|---|---|---|---|
| **ಹೆಸರು** | **:** | **ಶಾಂತಾಬಾಯಿ** | **ಚಾ.ಸಾ. 11** |
| **ಗಂಡನ ಹೆಸರು** | **:** | **ಶಿವಶರಣಪ್ಪ** | **ಪ್ರಾ.ಸಾ. 6** |
| **ವಯಸ್ಸು** | **:** | **50 ವರ್ಷ** | **ದಿನಾಂಕಃ 30-06-2025** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಗೌಡನ ಹಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-3 ರಿಂದ 5 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಮೃತ ಶಾಂತಾಬಾಯಿ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಈಗ 2 ರಿಂದ 3 ವರ್ಷಗಳ ಹಿಂದೆ ಸುಲೇಪೇಟದಿಂದ ಗೌಡನಹಳ್ಳಿ ಗ್ರಾಮಕ್ಕೆ ನಾನು, ಪ್ರಾಸಾ-3, 4 ಹಾಗೂ ಒಟ್ಟು 4 ಜನರು ಆಟೋದಲ್ಲಿ ಹೋಗುತ್ತಿದ್ದೇವು. ಆ ದಿನ ಆಟೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಚಿಮ್ಮಇದಲಾಯಿ ಕ್ರಾಸ್ ಹತ್ತಿರ ರಸ್ತೆ ಕಚ್ಚಾ ಇದ್ದ ಕಾರಣ ಆಟೋ ಪಲ್ಟಿಯಾಗಿರುತ್ತದೆ. ಆ ದಿನ ಅಪಘಾತವಾದ ಸ್ಥಳ ಈಗ ನೋಡುತ್ತಿರುವ ನಿಪಿ-4 ಭಾವಚಿತ್ರದಲ್ಲಿ ಇದೆ. ಅಪಘಾತದಲ್ಲಿ ನನಗೆ ಯಾವುದೇ ಗಾಯವಾಗಿಲ್ಲ. ಆ ದಿನ ನಾವು ಹೋಗುತ್ತಿರುವ ಆಟೋ ನಿಪಿ-5 ರಿಂದ 7 ರ ಭಾವಚಿತ್ರಗಳಲ್ಲಿ ಇದೆ. ಆಟೋದಲ್ಲಿ ಕುಳಿತವರಿಗೆ ಸ್ವಲ್ಪ ಗಾಯಗಳಾಗಿದ್ದವು. ಆ ದಿನ ಎಮ್ಮೆ ಬರುತ್ತಿತ್ತು ಮತ್ತು ವಾಹನವನ್ನು ಸ್ವಲ್ಪ ತೀರುವಿದಾಗ ಅಪಘಾತವಾಗಿರುತ್ತದೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆ ದಿನ ನಾನು ಚಿಂಚೋಳಿಯಿಂದ ಆಟೋದಲ್ಲಿ ಹೋಗುತ್ತಿದ್ದೆ ಎಂದರೆ ಸಾಕ್ಷಿ ಸುಲೇಪೇಟದಿಂದ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಆರೋಪಿ ಆಟೋವನ್ನು ಅತಿ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಆಟೋ ಪಲ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಆಟೋದಲ್ಲಿ ಕುಳಿತ ಶಾಂತಾಬಾಯಿರವರು ಅಪಘಾತದ ಕಾರಣ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರು

ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**